**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**ಸಿ.ಸಿ. 238/2020**

| | |
|---|---|
| ***ಹೆಸರು*** | ಮೊಹಮ್ಮದ್ ಗೌಸ್ |
| ತಂದೆಯ ***ಹೆಸರು*** | ಚಾಂದ ಬಾಷ |
| ***ವಯಸ್ಸು*** | 30 ವರ್ಷ |
| ***ವೃತ್ತಿ*** | ಖಾಸಗಿ ಕೆಲಸ |
| ***ವಿಳಾಸ*** | ಸಿರುಗುಪ್ಪ . |

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 10-09-2025.**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ</u>**

1. ಚಾಸಾ-1 ಮತ್ತು 8 ರವರು ಗೊತ್ತು. ದಿಃ28-07-2019 ರಂದು ಪೋಲೀಸರು ಎರಡು ಸ್ಥಳಗಳಲ್ಲಿ ಪಂಚನಾಮೆಯನ್ನು ಮಾಡಿದರು. ಒಂದು ಪಂಚನಾಮೆಯನ್ನು ಆರೋಪಿ ನಂಬರ್ 1 ರವರ ಮನೆಯಲ್ಲಿ ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಾಡಿದರು. ಮತ್ತೊಂದು ಪಂಚನಾಮೆಯನ್ನು ಸಿರುಗುಪ್ಪ ನಗರದ ಸದಾಶಿವನಗರದ ಸುಬ್ಬರಾವ್ ರವರ ಮನೆಯಲ್ಲಿ ಬೆಳಿಗ್ಗೆ 11.30 ರಿಂದ 12.30 ಗಂಟೆಯವರೆಗೆ ಮಾಡಿದರು. ಸ್ಥಳದಲ್ಲಿ ಫೋಟೋವನ್ನು ತೆಗೆದರು. ಸಾಕ್ಷಿಯು ನಿಪಿಃ2 ಮತ್ತು 3 ರ ಪಂಚನಾಮೆಗಳನ್ನು ನೋಡಿ ಗುರತಿಸಿದ್ದರಿಂದ, ಸಾಕ್ಷಿಯ ಸಹಿಗಳನ್ನು ನಿಪಿಃ2 ಬಿ ಮತ್ತು 3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ6 ಮತ್ತು 7 ಗುರುತಿಸಲಾಗಿದೆ. ಆರೋಪಿ ನಂಬರ್ 1 ರವರು ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದಾರೆ ಎಂಬ ಪ್ರಕರಣದಲ್ಲಿ ಪಂಚನಾಮೆಯನ್ನು ಮಾಡಿದರು.

**ಪಾಟಿ ಸವಾಲುಃ ಆರೋಪಿತರ ಪರ ವಕೀಲರಿಂದ**

2. ನಮ್ಮ ಮನೆ ಸಿರುಗುಪ್ಪದ 25 ನೇ ವಾರ್ಡ್ ನಲ್ಲಿರುತ್ತದೆ. ದಿಃ28-06-2019 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ಆರೋಪಿ ನಂಬರ್ 1 ರವರ ಮನೆಯ ಬಳಿ ಇದ್ದೆ. ಚಾಸಾ-8 ರವರು ನನಗೆ ಸ್ನೇಹಿತರಾಗಬೇಕು ಆ ಕಾರಣಕ್ಕೆ ನಾನು ಹೋಗಿದ್ದೆನು. ಚಾಸಾ-8 ರವರು ಕರೆದಿದ್ದಕ್ಕೆ ನಾನು ಹೋಗಿದ್ದೆ. ಚಾಸಾ-1 ರವರ ಚಿಕ್ಕಪ್ಪನ ಮಗ ರಾಜೇಶ್ ಎನ್ನುವವರು ಇರುತ್ತಾರೆ. ಅವರು ಚಾಸಾ-8 ರವರಿಗೆ ಸ್ನೇಹಿತರಾಗಬೇಕು. ಜಗಳ ಆಗಿರುತ್ತದೆ ಹೋಗೋಣ ಬಾ ಎಂದು ರಾಜೇಶ್ ರವರು ನನ್ನನ್ನು ಮತ್ತು ಚಾಸಾ-8 ರವರನ್ನು ಕರೆದುಕೊಂಡು ಹೋಗಿರುತ್ತಾರೆ.

3. ನಿಪಿಃ2 ಮತ್ತು 3 ರ ಪಂಚನಾಮೆಗಳನ್ನು ಪೊಲೀಸರು ಬರೆದರು . ಪೊಲೀಸರು ನಮಗಿಂತ ಮೊದಲೆ ಸ್ಥಳ ತಲುಪಿದ್ದರು. ಪೊಲೀಸರು ನಮ್ಮನ್ನು ಕರೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿಃ3 ರ ಪಂಚನಾಮೆಯನ್ನು ಮಾಡಲು ಪೊಲೀಸರು ಕರೆದರು ಎಂದು ನುಡಿಯುತ್ತಾರೆ. ಆ ದಿನ ಮೂರು ಜನ ಪೊಲೀಸರು ಇದ್ದರು. ಅವರ ಹೆಸರು ನನಗೆ ಹೇಳಲು ಆಗುವುದಿಲ್ಲ. ನಿಪಿಃ2 ಮತ್ತು 3 ರಲ್ಲಿ ಬರೆದಿರುವ ವಿಚಾರ ನನಗೆ ಸಂಪೂರ್ಣವಾಗಿ ಗೊತ್ತಿಲ್ಲ. ಗಂಡ ಹೆಂಡತಿಯ ನುಡುವೆ ಜಗಳ ಆದ ಬಗ್ಗೆ ಬರೆದಿರುತ್ತಾರೆ.

4. ಈ ದಿನ ಪೊಲೀಸರು ನನ್ನನ್ನು ನ್ಯಾಯಾಲಯಕ್ಕೆ ಬರಲು ಹೇಳಿರುತ್ತಾರೆ. ರಾಜೀಶ್ ರವರು ಸಹ ನನಗೆ ಹೇಳಿರುತ್ತಾರೆ ಎಂರದೆ ಸರಿ. ಚಾಸಾ-4 ಮತ್ತು 5 ರವರು ನನಗೆ ಸ್ನೇಹಿತರು ಎಂದರೆ ಸರಿ. ಆರೋಪಿ ನಂಬರ್ 1 ರವರ ಮನೆಯ ಚೆಕ್ಕು ಬಂದಿಯನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿ ನಂಬರ್ 1 ರವರು ಚಾಸಾ-1 ರವರನ್ನು ಹೊಡೆಯುತ್ತಿದ್ದಾರೆ ಎಂದು ತಿಳಿದು ನಾವೇ 8-10 ಜನರ ಗುಂಪುಕಟ್ಟಿಕೊಂಡು 1 ನೇ ಆರೋಪಿಯನ್ನು ಹೊಡೆಯಲು ಹೋಗಿದ್ದೆವು ಎಂದರೆ ಸರಿಯಲ್ಲ.

5. ಆರೋಪಿ ನಂಬರ್ 1 ರವರ ಮನೆಯು ಆರ್ ಸಿ ಸಿ ಹೊಂದಿತ್ತು. ಅದು 20X15 ಅಡಿ ಇತ್ತು. ಅಲ್ಲಿ ಪಂಚನಾಮೆಯನ್ನು ಮಾಡುವಾಗ ಆರೋಪಿ ನಂಬರ್ 1 ರವರು ಇದ್ದರು. ಆ ಸಮಯದಲ್ಲಿ ಫೊಟೋವನ್ನು ತೆಗೆದಿದ್ದರು. ಫೊಟೋದಲ್ಲಿ ಆರೋಪಿ ನಂಬರ್ 1 ರವರು ಕೂಡ ಇದ್ದರು. ನಾನು ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿ. ನಿಪಿಃ1

ರ ದಾಖಲೆಗೆ ಸಹಿ ಮಾಡಿದಾಗ ಸಮಯ 11.30 ಗಂಟೆ ಆಗಿತ್ತು. ಪೊಲೀಸರು ಪಂಚನಾಮೆಯನ್ನು ಪೊಲೀಸ್ ಠಾಣೆಯಲ್ಲಿ ಬರೆದರು ಎಂದು ನನಗೆ ಗೊತ್ತಿಲ್ಲ. ನಾನು ಎರಡು ಕಡೆ ಸಹಿಗಳನ್ನು ಮಾಡಿದ್ದೇನೆ.

6. ಸುಬ್ಬರಾವ್ ರವರ ಮನೆಯ ಬಳಿ ಪಂಚನಾಮೆ ಮಾಡಿದ ಸ್ಥಳದ ಚಕ್ಕು ಬಂದಿ ಹೇಳಲು ಆಗುವುದಿಲ್ಲ. ಅಲ್ಲಿ ಫೊಟೋವನ್ನು ತೆಗೆದು ನನ್ನನ್ನು ಕಳುಹಿಸಿದರು. ಅಲ್ಲಿ ಯಾವುದೇ ವಿಚಾರಣೆಯನ್ನು ಮಾಡಲಿಲ್ಲ ಎಂದರೆ ಸರಿ.. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಬರ್ 1 ರವರ ಹೆಸರು ವೆಂಕಟೇಶ್ ಎಂದು ಮಾತ್ರ ತಿಳಿದಿದೆ ಎಂದರೆ ಸಾಕ್ಷಿಯು ತಾನು ಮದುವೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಜಗಳದ ಸಮಯದಲ್ಲಿ ಹೋದಾಗ ಅವರನ್ನು ನೋಡಿದ್ದೆ. ಜಗಳ ಮೊದಲೆ ಆಗಿತ್ತು. ದೂರುದಾರರ ಸಹೋದರನ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು-ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ.**